ಸ್ವಚ್ಛ ಗ್ರಾಮ ಯೋಜನೆಯಡಿ ಪ್ರಾರಂಭಿಸಲಾಗಿರುವ ಕಾಮಗಾರಿಗಳು

4032 (4556) : ಶ್ರೀ ಅಂಗಾರ ಎಸ್ (ಸುಳ್ಯ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಈವರೆಗೆ ಎಷ್ಟು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಆ) ಸ್ವಚ್ಛ ಗ್ರಾಮ ಯೋಜನೆಗೆ ಕೇಂದ್ರ ಸರ್ಕಾರ ಒದಗಿಸುವ ಹಣ ಎಷ್ಟು; ಇದರಲ್ಲಿ ರಾಜ್ಯ ಸರ್ಕಾರದ ಪಾಲು ಎಷ್ಟು; ವಿವರ ಒದಗಿಸುವುದು;

ಇ) ಈ ಕಾಮಗಾರಿಗಳಿಗೆ ಸಾರ್ವಜನಿಕ ಮೂಲಕ ಸಂಗ್ರಹಿಸಲಾದ ಹಣ ಎಷ್ಟು;

ಈ) ಯೋಜನೆಯಡಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದಲ್ಲಿ ಸಂಪೂರ್ಣ ವಿವರ ನೀಡುವುದು)?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ರಾಜ್ಯದ ಎಲ್ಲ 27 ಜಿಲ್ಲೆಗಳಲ್ಲಿ ಸ್ವಚ್ಛ ಗ್ರಾಮ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಆ) ರೂ. 260.00 ಕೋಟಿ ಅಂದಾಜಿನ ಸ್ವಚ್ಛ ಗ್ರಾಮ ಯೋಜನೆ ಸಂಪೂರ್ಣವಾಗಿ ರಾಜ್ಯ ಸರ್ಕರದ ಯೋಜನೆಯಾಗಿದೆ. ಈ ಯೋಜನೆಯ ಬಂಡವಾಳ ವೆಚ್ಚದ ಪಾಲುಗಳ ವಿವರಗಳು ಕೆಳಕಂಡಂತಿವೆ:

1.	ಹುಡ್ಕೋ ಸಂಸ್ಥೆಯಿಂದ ಸಾಲ	–	ರೂ. 208.00 ಕೋಟಿ
2.	ರಾಜ್ಯ ಸರ್ಕಾರದ ಪಾಲು	–	ರೂ. 26.00 ಕೋಟಿ
3.	ಸಮುದಾಯ ವಂತಿಗೆ	–	ರೂ. 26.00 ಕೋಟಿ

ಇ) ಈವರೆವಿಗೆ ಒಟ್ಟು ರೂ. 16.28 ಕೋಟಿ ಸಾರ್ವಜನಿಕ ವಂತಿಗೆಯನ್ನು ಈ ಯೋಜನೆಯಡಿ ಸಂಗ್ರಹಿಸಲಾಗಿದೆ.

ಈ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಣೇಕಲ್ಲು ಗ್ರಾಮದಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿ ಕೈಗೊಂಡ ಕಾಮಗಾರಿಯಲ್ಲಿ ರೂ. 2.00 ಲಕ್ಷದ ಅವ್ಯವಹಾರ ಆಗಿದ್ದು ಸಂಬಂಧಪಟ್ಟ ಇಂಜಿನಿಯರ್ ರವರಾದ ಶ್ರೀ ಪಿ.ಎಸ್. ಬೆನಕಟ್ಟಿ ರವರ ವಿರುದ್ಧ ಶಿಸ್ತು ಕ್ರಮ ಕೈಗೊಂಡು ನಷ್ಟ ವಸೂಲು ಮಾಡುವುದರ ಜೊತೆಗೆ ಕಠಿಣ ದಂಡನೆಯನ್ನು ವಿದಿಸಿ, ದಿ: 17.3.03 ರಂದು ಸೇವೆಯಿಂದ ವಜಾ ಮಾಡಲಾಗಿದೆ.

ಸ್ವಚ್ಛ ಗ್ರಾಮ ಯೋಜನೆಯಡಿ ಕಲ್ಮಡಕ ಮತ್ತು ಬೆಳ್ಳಾರೆ ಗ್ರಾಮಗಳಲ್ಲಿ ಗುರುತಿಸಲಾದ ಕಾಮಗಾರಿಗಳು

4033 (4557) : ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ವಚ್ಛ ಗ್ರಾಮ ಯೋಜನೆಯಡಿ ಕಲ್ಮಡಕ ಮತ್ತು ಬೆಳ್ಳಾರೆ ಗ್ರಾಮ ಪಂಚಾಯಿತಿ ವ್ಯಪ್ತಿಯಲ್ಲಿ ಎಷ್ಟು ಕಾಮಗಾರಿಗಳನ್ನು ಗುರುತಿಸಲಾಗಿದೆ;

ಆ) ಈ ಕಾಮಗಾರಿಗಳಿಗೆ ಸಾರ್ವಜನಿಕರಿಂದ ಸಂಗ್ರಹಿಸಲಾದ ಹಣ ಎಷ್ಟು; (ಸಂಗ್ರಹ ಮಾಡಿದ ಹಣದ ವಿವರಗಳನ್ನು ಕಾಮಗಾರಿವಾರು ನೀಡುವುದು);

ಇ) ಯೋಜನೆಯಡಿ ಈ ಎರಡೂ ಗ್ರಾಮ ಪಂಚಾಯತಿಗಳಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಸಂಪೂರ್ಣ ವಿವರವನ್ನು ಪಂಚಾಯತ್‌ವಾರು ಅಂದಾಜು ವೆಚ್ಚದೊಂದಿಗೆ ನೀಡುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಸ್ವಚ್ಛ ಗ್ರಾಮ ಯೋಜನೆಯಡಿ ಕಲ್ಬಡಕ ಮತ್ತು ಬೆಳ್ಳಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ 2 ಗ್ರಾಮಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಆ) ಈ ಕಾಮಗಾರಿಗಾಗಿ ಕಟ್ಟಡಕ ಮತ್ತು ಬೆಳ್ಳಾರೆ ಗ್ರಾಮಸ್ಥರಿಂದ ತಲಾ ರೂ. 2.00 ಲಕ್ಷದಂತೆ ಒಟ್ಟು ರೂ. 4.00 ಲಕ್ಷಗಳನ್ನು ಸಂಗ್ರಹಿಸಲಾಗಿದೆ.

ಇ) ವಿವರಗಳನ್ನು ಅನುಬಂಧ –1 ರಲ್ಲಿ ನೀಡಲಾಗಿದೆ.

ಕರ್ನಾಟಕ ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 4557 ರ ಉತ್ತರದ ಲಗತ್ತು

ಅನುಬಂಧ–1

		ಪಂಚ ಸೂತ್ರದನ್ವಯ ಅನುಮೋದನೆಯಾದ ಅಂದಾಜು ವಎಚ್ಚ (ರೂ. ಲಕ್ಷಗಳಲ್ಲಿ)					
ಕ್ರಮ ಸಂಖ್ಯೆ	ಗ್ರಾಮದ ಹೆಸರು	ರಸ್ತೆ ಮತ್ತು ಚರಂಡಿ ನಿರ್ಮಾಣ	ಮಿಶ್ರ ಗೊಬ್ಬರದ ಅಂಗಳ	ಹೊಗೆರಹಿತ ಒಲೆ ನಿರ್ಮಾಣ	ಕೌಟುಂಬಿಕ ಶೌಚಾಲಯ ನಿರ್ಮಾಣ	ಸಾಮೂಹಿಕ ಹಾಗೂ ಶಾಲಾ ಶೌಚಾಲಯ ನಿರ್ಮಾಣ	ಒಟ್ಟು
1.	ಕಲ್ಬಡಕ	19.30	ಇಲ್ಲ	0.10	ಇಲ್ಲ	0.60	20.00
2.	ಬೆಳ್ಳಾರೆ	18.375	ಇಲ್ಲ	0.025	ಇಲ್ಲ	1.60	20.00

ಬೆಂಗಳೂರಿನ ಹೃದ್ರೋಗ ನೀಡಿದ ಜಯದೇವ ಆಸ್ಪತ್ರೆಗೆ ಅನುದಾನ

4038 (4725) : ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಯದೇವ ಆಸ್ಪತ್ರೆಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನ ಮೊತ್ತ ಎಷ್ಟು (ವರ್ಷವಾರು ವಿವರ ನೀಡುವುದು);

ಆ) ಈ ಅನುದಾನದಲ್ಲಿ ಸಂಸ್ಥೆಯ ಸಿಬ್ಬಂದಿ ಸಂಬಳ, ನಿರ್ವಹಣೆ ಮತ್ತು ಔಷಧಿಗಳ ಖರೀದಿಗಾಗಿ ವಹಿಸುತ್ತಿರುವ ಮೊತ್ತವೆಷ್ಟು; (ವರ್ಷಾವಾರು ವಿವರ ನೀಡುವುದು);

ಇ) ರಾಜ್ಯದಲ್ಲಿ ಪ್ರತಿ ವರ್ಷ ಹೃದ್ರೋಗಿಗಳ ಸಂಖ್ಯೆ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆಯೇ; ಮಾಡುತ್ತಿದ್ದಲ್ಲಿ 3 ವರ್ಷಗಳ ವಿವರ ನೀಡುವುದು;

ಈ) ಈ ಸಂಸ್ಥೆಯಲ್ಲಿ ಅತ್ಯಂತ ಅವಶ್ಯಕವಾದ ಜೀವ ರಕ್ಷಕ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಸರ್ಕಾರ ಅತ್ಯಂತ ಸುಸಜಿತವಾದ ಕಟ್ಟಡ ಉಪಕರಣಗಳನ್ನು ಒದಗಿಸಿ ಔಷಧಿಗಳನ್ನು ಖರೀದಿ ಮಾಡಲು ಅನುದಾನ ನೀಡಿದ್ದಲ್ಲಿ ಬಡ ರೋಗಿಗಳಿಗೆ ತೊಂದರೆಯಾಗಿ, ಮೂಲ ಉದ್ದೇಶವೇ ಈಡೇರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?